ಮೊ (೮)ರಕಕುಲ : ರಣಮೂರ್ಖಕುಲ

ಒಂದು ಚಿಂತನೆ

೧. ಕ್ರಿ. ಶ. ೮೬೭–೬೮ ರಲ್ಲ ರಚಿತವಾದ ಒಂದು ಶಾಸನದ ಒಕ್ಕಣಯಲ್ಲಿ ಬರುವ ಕೆಲವು ಮಾತುಗಳು:

ಸ್ವಸ್ತಿ [ಪ್ರಚಣ್ಡ ] ಮಣ್ಡ

[ಳಾ] ಗ್ರ ಖಣ್ಡ ತಾರಾತಿಮ ಣ್ಡಳ ಫ್ರ ತಾಪ ಸಂಪನ್ನ ಯಾದವವಂಶೋದವ ರಣ (ಮೂರ್ಖ) ಧಳವ ಷಟ್ಬುಣಾಳಂಕಾರ ಆಹವಾದಿತ್ಯ ಶ್ರೀಮತ್ಕುಪ್ಪೆಯರಸಪ್ರ್ಪುರಿಗೆಜಿ ನಾಡನಾಳುತ್ತಿರೆ ಸರಟಪುರದ ಅಮ್ಮದಿಮರ್....

[ಸೌ .ಇ.ಇ ೧೧–೧, ೧೨.೮೬೭–೬೮. ರೊರಟೂರು(ಧಾಜಿ./ಗಗದ ತಾ.) ಪು.೮]

೨. ಕ್ರಿ. ಶ.೮೯೭ ರೆ ಅವಧಿಗೆ ಸೇರಿದ ಇನ್ನೊಂದು ಶಾಸನದ ಸಾಲುಗಳಿವು:

ಸ್ವಸಿ ಸಮಧಿಗತ

ಪಂಚಮಹಾಶಬ್ದ ಮಹಾಸಾಮನ್ತಂ ಯಾದವ ವಂದೋದವಂ

ಫ್ರಚಣ್ಡ ದೋರ್ದ್ದಣ್ಡ ಮಣ್ಡಳಾ

ಗ್ರಖಣ್ಡ್ ತಾರಾತಿಮಣ್ಡಳ್ಳಂ ಫ್ರತಾಪ ಸಂಪನ್ನಂ ರಿಪುಬುಳ

ಜಳದಿಸಮುತನ್ನ ೦ ಶ್ರೀಕಾ

ನ್ತಾ ಕಾನಂ ರಣಮೂರ್ಕ್ಖಧವಳಂ ರಣಮೂರ್ಕ್ಖಕೇಸರಿ ಕದನಾದಿತ್ಯಂ

[ಅದೇ. ೨೨.೮೯೭. ಮೇವುಣ್ಡ್ (ಧಾಜಿ/ ಮುಂಡರಗಿ ತಾ. )ಪು. ೧೩]

೩. ಕ್ರಿ. ಶ. ಹತ್ತನೆಯ ಶತಮಾನದ (ಸು.೯೮೦)ರ ಮತೊಂದು ಶಾಸನದ ಪಂಕಿಗಳಿವು:

ಶ್ರೀ ಯುವತಿ ನಿಜವಿಜಯ

ಶ್ರೀ ಯುವತಿ ಸವತಿಯೆನಿಸೆ ರಣಮೂರ್ಖ್ಖನೃಪಾ

ಮಾಯದೊಳಾಯದ ನೆಗೆಜಿಯಂ ಫ್ರ ಕಟಸಿದನ್,

[ಎ.ಕ.೨(ಪ) ೧೭೨(೧೩೯) ಪು.೧೧೬]

೪. ಹನ್ನೊಂದನೆಯ ಶತಮಾನದ ಮಗದೊಂದು ಶಾಸನೋಕ್ತಿಗಳು:

ಸಮಾಧಿಗತ ಪಂ ಇಮಹಾ ಶಬ್ದ ಮಾಹಾಸಾಮನ್ತಂ

ರಿಪು ಬಳಕ್ರಿತಾನಂ ರಣಮೂರ್ಖ್ವ ವಂಶೋದ್ಭವಂ

ಸಿಂಗನ ಬಂಟಂ ಶ್ರೀಮದಾಯ ವರ್ಮರಸಂ

[ಸೌ .೯ .೯೧೧-೧ , ೬೨೧೯ಲಳ(ಬೀಳಗಿತಾ)ಪು. ೫೨]

೫. ಹನ್ನೊಂದನೆಯ ಶತಮಾನದ್ದೇ ಆದ ಬೇರೊಂದು ಶಾಸನದಿಂದ:

ಹರಿಹರ ಹಿರಣ್ಯ ಗರ್ಭ್ಭ

ದ್ರೋಣಯೆನಿಪರ್ಮೂವರರ್ತ್ರಿಯಜಗಂ ನಾಕಂ

ಹರಿಸುತನನ್ನಂ ದೇವಂ

ಮೊರಕಾಮಾಯಕ್ಕೆ ತಿಳಕರಾಯನ ಪುತ್ರರ್॥

[ಅದೇ, ೬೫.೧೦೨೯. ಹೊಸೂರು (ಧಾಜಿ/ಗದಗತಾ)ಪು. ೫೬.ಸಾಲು ೪೦-೪೨]

ಇನ್ನೊಇತರ ಕೆಲವು ಪ್ರಯೋಗಗಳು ಹೀಗಿವೆ.

೬. ಮೊರಕ ಕುಳತಿಳಕನೆಱಕನ

ವರ ಪುತ್ರಂ ಪೊಲೆಗ ನೀ ಮಹೀಮಣ್ಡಳದೊಳ

ಸ್ಥಿರಮಾಗಿರೆ ಸಾಸನಮಂ

ಬರೆಹಿಸಿದಂ ನೆಲನುಮರ್ಕ್ಕನುಂ ನಿಲ್ವಿನೆಗಂ॥

[ಅದೇ, ಪು.೫೭. ಸಾಲು ೫೬-೫೭]

೭. ಇನ್ನವಾರ್ಯ್ಯ ಭುಜವಿಕ್ರಮನುಂ ಪರಬಳ ಪ್ರಳಯಭೈರವ

ನುವರಾತಿದಾವ ಪಾವಕನುಂ ಮೊರಕಕುಳ ಸರೋಜಿನೀ

ರಾಜಹಂಸನುಂ .........ಎನಿಸಿ ತನ್ನ ಪೆಸರೆ ಪೆಸರಾಗಿ

ಪೊಸವೂರನೇಕ ಭೋಗದಿನಾಳ್ದು (ನಾಕಿಗಾವುಣ್ಡಂ)ಸುಖ

ಸಂಕಥಾವೊನೋದದಿನಿಳ(ಂ)

[ಅದೇ ,೧೫೨. ೧೧೦೩.ಹೊಸೂರು ಪು. ೧೯೦.ಸಾಲು ೨೩-೨೫]

೮. ದ್ವಾರಾವತೀ ಪುರವರೇಶ್ವರಂ। ಯಾದವವಂಶೋದ್ಭವಂ। ಸುವರ್ಣ್ನಗರುಡ

ಧ್ವಜಂ । ರಣಮೂರ್ಖ್ವ ಪಾರ್ತ್ಥಂ । ಶ್ರೀಮನ್ಮಾಧವಾರರಸರ್।

[ಅದೇ, ೯೨.೧೦೫೯ .ತಾಂಬ್ರಗುಂಡಿ (ಧಜಿ/ಮುಂಡರಗಿತಾ) ಪು. ೮೮]

೯. ಮೋರಿಯಾನ್ವಯರ್ಕೆನಳಮೇ । ಮೋರಿಯಕುಲತಿಳಕರ್..........

[ಅದೇ . ೧೩೨. ೧೦೮೭ .ಕುರ್ತ್ಕೋಟ (ಧಾಜಿ./ ಗದಗತಾ.) ಪು.೧೫೭]

೧೦. ಹರಚರಣನಖಕಿರಣ ಕುಸುಮ ಮಂಜರೀ ಪರಿರಂಜಿತೋ

ತ್ತಮಾಂಗನುಂ ಶಿವಕಥಾ ಪ್ರಸಂಗನುಂಮೋರಕುಕುಳನಭಸಳೀಗಭಸಿ ಮಾಲಿಯುಂ

ದುರ್ದಮಪ್ರತಾಪ ಶಾಲಿಯುಮಪ್ಪ ಹೊಸವೂರ ಮಹಾ ಪ್ರಭು ಹೊಲ್ಲ ಗಾವುಣ್ಡ್ಂ

ಮೋರಕೇಶ್ವರ ದೇವರಾಚಾರ್ಯ್ಯ ರಪ್ಪಜಾನ ಶಕ್ತಿ ದೇವರ ಕಾಲು ಕರ್ಚ್ಚಿಕ್ಕ ಧಾರೆಯೆಱದು

ತಮೋಧನರಾಹಾರದಾನಕ್ಕೆ ಬಿಟ್ಟು ಮತ್ತೆರೊನು[ ಸೌ.ಇ.ಇ .೧೫,೫೨. ೧೧೫೫. ರು ಪು.೯ನೋಡಿ, ಅದೇ, ೫೧,೧೧೫೫ ಹೊಸೂರು]

೧೧. ಶ್ರೀಮೋರಕೇಸ್ವರ ದೇವರಾಚಾರ್ಯ್ಯಜಾನ ಶಕ್ತಿ ಪಂಡಿತದೇವ

[ಸೌ. ಇ.ಇ. ೧೮,೧೪೫.೧೧೪೧. ಕಣವಿ(ಧಾಜಿ./ಗಗದತಾ.)ಪು. ೧೮೮]

೧೨.ಮೋರಕುಕುಳ ಹೊಲ್ಲ ಗಾವುಣ್ಡ್ ಹೂಸವೂರ ಮಹಾ ಪ್ರಭು ಕೊಟ್ಟದಾನಶಾಸನ

[ಸೌ. ಇ. ಇ ೧೫, ೫೧–೧೧೫೫. ೯ಸುರು; ನೋಡಿ ಅದೇ, ೫೨, ೧೧೫೫.ಹೊಸೂರು]

ಎಂಬಿತ್ಯಾದಿ ಪ್ರಯೋಗಗಳನ್ನು ಗಮನಿಸಿದಮೇಲೆ ಒಟ್ಟರ ಕಂಡು ಬರುವಂತೆ ರಣಮೂರ್ಖ–ರಣಮೋರಕ ಎಂಬ ಪ್ರ ಯೋಗಕ್ಕೂ ಮೋರಕ ಕುಳಕ್ಕೂ ಸಂಬಂಧಇರುವುದು ಸ್ಪಷ್ಟವಾಗುತ್ತದೆ. ರಣಹಾಸಿಗಳ 'ರಣಮೋರಕ–ರಣಮೂರ್ಖ' ಎಂದು ಶಬ್ದರೂಪ ಪರಿವರ್ತನೆ ಪಡೆದುಕೊಂಡಿದೆ. ಈ ಬಗೆಯ ತೀರ್ಮಾನಕ್ಕೆ ತಲಪಲು ಮೇಲಿನ ಶಾಸನ ಪ್ರ ಯೋಗಗಳು ನೆರವಾಗಿವೆ, ಅಲ್ಲದೆ ಇವೇ ಶಾಸನಗಳಲ್ಲಿಯೂ ಇನ್ನಷು ಉಪಪಂಬಕ ಹೇಳಿಕೆಗಳಿವೆ. ಮೋರಕಕುಳ ನಾಯಕರನ್ನು ವರ್ಣಿಸುವಾಗ ಶಾಸನಗಳಲ್ಲಿ ಬಂದಿರುವ ಪೂರಕ ವಿಶೇಶಣಗಳು ಇಂತಿವೆ:

೧. ಸಂಗಾಮಜಯಿ ಕೆಂಚನೆಂಬೋನ್ಇಳಾಮಹಿತಂ ವೀರಂ

೨. ಭುಜ ಬಲದೊರಗೆವರಲ್ಲೆ ಱಯರೇಂ ಪ್ರ ತಾಪಿಯೋಮುದ್ದಂ

೩. ಆಹವಶೌಣ್ಡ್ಂ ತೊಣ್ಡ್ಂ ತದನ್ವವಾಯನಜೇಯಂ

೪. ಅಜೇಯಂ ಕಾಳಿಧುರಂಧರಂ

–ಇವಿಷ್ಟೊ ಮಾತುಗಳು [ಸೌ.ಇ.ಇ. .೧೧–೧, ೪೫.೯೮೦] ಪ್ರಾಚೀನ ಶಾಸನದಲ್ಲಿಯು ಬಂದಿವೆ. ರಣಮೂರ್ಖಧವಳ ಎಂದ್ರೆ ಯುವೀರರಾದ ಮೋರಕ ಕುಲದವರಲ್ಲಿ ಶ್ರೇಷನಾದನೆಂದೂ,

ರಣಮೂರ್ಖಕೇಸರಿಯೆಂದರೆ ಯುದ್ದ ವೀರರಾದ ಮೋರಕ ಕುಲದವರಲ್ಲಿ ಸಿಂಹನಂತೆ ಇರುವವನೆಂದೂ ಅರ್ಥ. ಇದರ ಸಮಾನಾರ್ಥಕ ಶಬ್ದವೇ 'ಮೊರಕಕುಳ ತಿಳಕ' ಎಂಬುದು .

,

ಮೋರಕಕುಲ ಯಾವುದೆಂಬುದು ಚಿಂತನೀಯವಾಗಿದೆ. ಇದರ ಮೂಲ 'ಮಯುರ ಕುಲ'ವೆಂದು ಕಾಣುತ್ತದೆ. 'ಮೋರ' ಎಂಬುದು ಮಯೂರ  ಎಂಬುದು ಎಂಬುದರ ಇನೂಂದು ರೂಪ :  ಮೋರಮೆಂದುಂ ಸೋಗೆಯೆದುಂ ನವಿಲ್–ಎಂಬುದಾಗಿ ಕರ್ಣಾಟಕ ಶಬ್ದ ಸಾರವೆಂಬ ನಿಘಂಟಿನ ವಿವರಣ [೫೧–೯೬] ಸಂಸ್ಕೃತ ಮಯೂರ ಶಬ್ದವು ಫ್ರಾಕೃತದಲ್ಲಿ ಮೋರ್ಎಂದಾಗಿ, ಕನ್ನಡದಲ್ಲಿ ಮೋರ ಎಂದಾಗಿದೆ . ವಾಸ್ತವವಾಗಿ ಇವೆಲ್ಲದಕ್ಕೊ ವೊಲದಲ್ಲಿದ್ದ ಹೆಸರು ಕನ್ನಡದ 'ನವಿಲ್ಗುಂದಕುಲ' ಎಂಬುದನ್ನು ಸಂಸ್ಕೃತೀಕರಿಸಿದ್ದರ ಫಲ 'ಮೋರಕ ಕುಲ' ಇದು ಸ್ಥಳವಾಚಿ ಶಬ್ದ.ಧಾರವಾಡ ಜಿಳೆಯ ನವಿಲ್ಗುಂದವೇ ಮೋರಕಕುಲದವರ ಮೊದಲ ನೆಲೆವೀಡೆಂದು ಶಾಸನ ದಾಖಲಿಸಿದೆ.[ಸೌ. ಇ.ಇ.೧೧೧–೧, ೪೫.೯೮೦] ಕ್ರಿ. ಶ.೮೨೫ ರ ವೇಳೆಗಾಗಲೇನೆ ಕೆಂಚನೆಂಬ ವೀರನು ಬೆಳ್ವಲ ನಾಡಿನಲ್ಲಿ ನವಿಲ್ಗುಂದವನ್ನು ತನ್ನರಾಜಧಾನಿ ಮಾಡಿಕೊಂಡಿದ್ದನೆಂಬ ವಿವರ ಕುರಹಟ್ಟಿಯ ಶಾಸನದಲಿ ದೆ[ಅದೇ,ಪು.೩೦–೩೨].

ಕುರುಹಟ್ಟಿಯ ಶಾಸನದಲ್ಲಿ ಕತ್ತಲೆ (ಕಟಿಲೆ–ಕರ್ತ್ತಲೆ) ಕುಲದ ವರಿಷಮೇಲಾಳುಗಳ ಹೆಸರುಗಳಿವೆ. ರೇವನ್ನ, ಕೆಂಚ, ಸಿರಿಮುದ್ದ , ಪಿರಿಯಕೋಟಿಗಾವುಣ್ಡ ,ಪಿರಿಆಯ,ತೊಣ್ಡ , ಕಾಳಿಧುರಂದರ– ಇವರೆಲ್ಲ ಬೆಳ್ವಲ ನಾಡಿನ ನಾಯಕರು.ಇವರ ಆದಿಪುರುಶನಾದ ಕೆಂಚನೆಂಬೋನ್ (ಪೂರ್ವದ ಹಳೆಗನ್ನಡದ ಈ ಶಬ್ದರೂಪ ಇದರ ಫ್ರಾ ಚೀನತೆಯ ಪಳೆಯುಳಿಕೆಯ ಕುರುಹು),ಕಾದಾಡಿ ಬೆಳ್ವಲವನ್ನು ಪಡೆದನ್ನು , ಅಲ್ಲಿ 'ಬಳಿಕ್ಕೆ ನವಿಲ್ಗುಂದಪುರ'ವನ್ನು ಟ್ಕಲ್ಥಲೆ ಕುಲದವರ ವಿಜಯ ಸಂಧಾವಾರಾವಾಗಿಸಿದನು [ಅದೇ,ಸಾಲು: ೨–೪]. ಇದೇ ಮಯೂರ (ಮೋರಕ) ವಂಶದಲ್ಲಿ ಪಿರಿಯ ಆಯನು  ಕ್ಷತ್ರಿ್ತಯರಿಗೂ,ಸಕಳ ಸಮಯಿಗಳ್ಲಿಗೂ, ಬುಧಜನರಿಗೂ ಆಶ್ರಯದಾತನಾದನು[ಅದೇ, ಸಾಲು೧೦–೧೨]ಈ ಪಿರಿಯಆಯ್ಚನ ಕಾಲು ಸು.೯೧೫.

ಪಿರಿಯ ಆಯ್ ಎಂಬ ಪೆಸರಿನ ಈ ಒಬ್ಬ ವ್ಯಕ್ತಿಯು ಇರಬೇಕಾದರೆ, ಸಹಜವಾಗಿಯೇ ಇದೇ ಸಮಕಾಲಿಕವಾಗಿ; ಕಿಱಿಯ ಆಯನೂ ಇರಬೇಕು : ಆ  ಕಿಱಿಯ ಆಯನೇ ಪೊಸವೂರ (ಹೂಸೂರ ) ಆಯ್ಚೊಗಾವುಣ್ಡ [ಸೌ. ಇ.ಇ.೧೧–೧,೪೭.೯೬೫ .ಪು.೩೩–೩೪] . ಕ್ರಿ. ಶ. ೯೬೫ ರಲ್ಲಿ ರಚಿತವಾದ ಈ ಹೊಸೂರ (ಧಾಜಿ/ಗದಗತಾ) ಶಾಸನವು ಕಿಱಿಯ ಆಯ್ಚಗಾವುಣ್ಡನನ್ನು ಹೆಸರಿಸಿದೆ.: ಅಲ್ಲದೆ ಇದೇ ಹೊಸೊರಿನ

ಇನ್ನೊಂದು ಶಾಸನದಲ್ಲಿ [ಅದೇ,೬೫.೧೧೨೯.ಪು. ೫೫-೫೭] ಪೊಸನೂರ ಆಯ್ಚಾಗ್ಗವುಣ್ಡನ [ಹೆಂ. ಕಂಚಿಕಬ್ಬೆ ಸೂಣ್ಡ್ಯ ಮದನಾಗಸೆಟ್ಟಿಯ ಮಗಳು] ಮಕ್ಕಳು,ಮೊಮ್ಮಕ್ಕ ಳು ಕುರಿತ ಮಾಹಿತಿಗಳಿವೆ.

ಕಟಿಲೆ ಕುಲವೂ, ಮೋರಕ ಕುಳವೂ ಒಂದೇ (ಸ್ಥಳ) ಮೂಲಕ್ಕೆ ಸೇರಿದ ಕುಲಗಳು.ಈ ಕುಲತಿಳಕರು ಧಾರವಾಡ ಜಿಲ್ಲೆಗೆ , ನೆರೆಹೊರೆಗೆ,ಅದರಲ್ಲಿಯೂ ಗದಗ -ನವಿಲ್ಗುಂದ ತಾಲೂಕಿನ ಪರಿಸರಕ್ಕೆ ಸೀಮಿತರು.ಪೊಸವೂರ(ಹೊಸೂರ), ಸರಟವುರ (ಸೊರಟೂರ), ನವಿಲ್ಗುಂದ,ಕಣವಿ, ಮೇಟಿವೀಡು(ಮೇವುಂಡಿ) ಹೆಗ್ಗೂಗ್ಗುರು (ಬಿಜಾಪುರಜಿ/ಬೀಳಗಿತಾ) ಇವು ಇವರ ಮುಖ್ಯ ಸ್ಥ ಳಗಳು: ಅದರಲ್ಲಿಯೂ ಹೊಸೂರ-ನವಿಲ್ಗುಂದ ಕೇಂದ್ರ ವಾಗಿದ್ದುವು

ಶೈವಬ್ರಾಹಣರು ಹಾಗೂ ಜೈನರು ಈ ವಂಶದಲ್ಲಿ ಇದಾರೆ.ವೈದಿಕ ಭ್ರಾಹ್ಮಣರು ಜೈನರಾಗಿದ್ದು (ಮೇವುಂಡಿ ಮತ್ತು ಹೊಸೂರ ೬೫ನೆಯ ಶಾಸನ ] ಮತ್ತೆ ಶೈವರಾಗಿ ಮತಾಂತರಿಸಿದರೆಂದು ಶಾಸನ ಆಧಾರಗಳು ಸೂಚಿಸೂತ್ತವೆ [ಹೊಸೂರ ೫೨ನೆಯ ಶಾಸನ, ಪೂರ್ವೋಕ್ತ ].ಕಟಿಲೆ ಕುಲದಲ್ಲಿ ಸು. ಕ್ರಿ. ಶ. ೯೦೦ ರಲ್ಲಿದ್ದ ಪಿರಿಯ ಕೋಟಿಗಾವುಣ್ಡನ ಶಿವಾಲಯವನೂ ಜೈನಶಾಲಾವನ್ನೂ ಮಾಡಿಸಿದನು[ಸೌ.ಇ.ಇ ೧೧-೧ ,೪೫] .ಪೊಸವೂರ ಆಯ್ದ್‌ಗಾವುಣ್ಡನು ಶೈವನಾಗಿದ್ದನು [ಅದೇ ,೪೭.೯೫]. ಪೊಸವೂರ ಆಯ್ಚಿಗಾವುಣ್ಡ್‌ನು ಕ್ರಿ. ಶ. ೧೦೨೮ ರ ವೇಳೆಗಾಗಲೇನೆ ಬಸದಿಯನ್ನು ಮಾಡಸಿದ್ದನು. ನಿಷಾವಂತ ಜೈನನಾಗಿದ್ದನು. ಯಾಪನೀಯ ಸಂಘದ ಶಿಷ್ಯನಾಗಿದ್ದನು.[ಹೊಸೂರ .೬೫. ೧೦೨೮].

ಆದರೆ ಅದೇ ಪೊಸವೂರ ಮಹಾಫ್ರ್‌ಭು ಮೋರಕಕುಳ ಹೊಲ್ಲಗಾವುಣ್ಡ್‌ನು ಕ್ರಿ.ಶ. ೧೧೫೫ ರಲ್ಲಿ ಶೈವಪರವಾಗಿದ್ದು ಮೋರಕೇಶ್ವರ ದೇವಾಲಯಕ್ಕೆ ದತ್ತಿಯಿತ್ತನು [ಹೊಸೂರ. ೫೨ .] ಗಾಮುಣ್ಡ್ ಸಾಮಿ ಕಟಿಯಮ್ಮನು ಸರಟಪುರ ದೇವಾಲಯಹ್ಕೊ ಮಠಕ್ಕೂ ವಿದ್ಯಾದಾನಕ್ಕಾಗಿ ಭೊಮಿ ಹೊನ್ನು ಕೊಟ್ಟನು[ಸೌ.ಇ.ಇ.೧೧-೧,೩೯.೯೫೧.ಪು ೨೪: ಇ.ಆ.೧೨,ಪು.೨೫೪]; ಈ ಗಾಮಣ್ಣಮಿ ಕಟಿಯಮ್ಮನು ಕಟಿಲೆ(ಕತ್ತಲೆ) ಕುಲದವನಿರಭೇಕು. ಆಯಾ ಸಮಕಾಲಿಕ ಶಾಸನಗಳ ಮಾಹಿತಿಯನ್ನು ತೌಲನಿಕವಾಗಿ ನೋಡುವುದರಿಂದ ಈ ರಣಮೂರ್ಖಕುಲ -ಕಟಿಲೆಕುಲ-ಮೋರಕ ಕುಳ ಇವುಗಳ ಜ್ಞಾತಿಸಂಬದದ ಸುಳಿವು ಸಿಗುತ್ತದೆ. ರಣಹಾಸಿಹಳ ಈ ರಣಮೂರ್ಖಾಮಾಯ ದಲ್ಲಿ ಹುಟ್ಟಿದಸಾವಿಯಬ್ಬೆಯು , ಕುದರೆ ಹತ್ತಿ ,ಆಯುಧ ಹಿಡಿದು ಹಗೆಯೊಂದಿಗೆ ಹೋರಾಡಿದ್ದು ಸಚಿತ್ರವಾಗಿ ಶ್ರವಣಬೆಳಗೊಳ ಶಾಸನದಲ್ಲಿ ದಾಖಲಾಗಿದೆ; ಚಿಕ್ಕ ಬೆಟ್ಟದ

ಮೇಲೆ ಕತ್ತಲೆ ಬಸದಿಯೊಂದ ಆಕೆಯ ಪರೋಕ್ಷವಿನಯಾರ್ಥವಾಗಿ ಕಟ್ಟಿಸಿರಭೇಕು. [ನಾಗರಾಜಯ್ಯ್,ಹಂಪ ಕವಿವರ ಕಾಮದೇನು :ಅತ್ತಿಮಬ್ಬೆ ,೧೯೯೬]